6/4/22

ಫೋನ್ ನಂ. 080-22243926
ಫ್ಯಾಕ್ಸ್ ನಂ. 080-22110134
ವೆಬ್‌ಸೈಟ್ : www.kptcl.com

ಇಮೇಲ್ ಐಡಿ: dgmtkptcl@rediffmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

ನಿಗಮ ಕಾರ್ಯಾಲಯ
ಕಾವೇರಿ ಭವನ
ಬೆಂಗಳೂರು-560009

ವಿಷಯ: ಕ.ವಿ.ಪ್ರ.ನಿ.ನಿ ಉಪಕೇಂದ್ರಗಳ ಸ್ಥಾಪನೆ, ಪ್ರಸರಣ ಮಾರ್ಗಗಳ ನಿರ್ಮಾಣ ಮತ್ತು ಹಾಲಿ ಇರುವ ಮೂಲ ಸೌಕರ್ಯಗಳ ಉನ್ನತೀಕರಣಕ್ಕೆ ಸಂಬಂಧಿಸಿದಂತೆ ಟೆಂಡರ್ ದಾಖಲೆಗಳಿಗೆ ತಿದ್ದುಪಡಿಯ ಬಗ್ಗೆ.

ಉಲ್ಲೇಖ: 1. ದಿನಾಂಕ: 18.11.2021 ರಂದು ನಡೆದ 126ನೇ ಮಂಡಳಿ ನಿರ್ದೇಶಕರುಗಳ ಸಭೆಯ ನಡಾವಳಿಗಳು.
2. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರಿಂದ ಅನುಮೋದಿತ ಟಿಪ್ಪಣಿ ದಿನಾಂಕ:06.04.2022.

<u>ಮುನ್ನುಡಿ:</u>

ಭೂ ಮಾಲೀಕರು ಒಡ್ಡುತ್ತಿರುವ ಅಡೆತಡೆಗಳಿಂದಾಗಿ ಪ್ರಸರಣ ಮಾರ್ಗಗಳ ನಿರ್ಮಾಣವನ್ನು ಒಳಗೊಂಡಿರುವ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆ ದಿನದಿಂದ ದಿನಕ್ಕೆ ಕಠಿಣವಾಗುತ್ತಿದೆ. ದಾರಿಯ ಸ್ವಾಮ್ಯದ (ROW) ಸಮಸ್ಯೆಗಳನ್ನು ಪರಿಹರಿಸುವುದು ಮಾಲೀಕರ (ಕ.ವಿ.ಪ್ರ.ನಿ.ನಿ) ಜವಾಬ್ದಾರಿಯಾಗಿದ್ದರೂ ಅವುಗಳನ್ನು ತೆರವುಗೊಳಿಸಲು ಗುತ್ತಿಗೆ ಸಂಸ್ಥೆಯ ಸಹಕಾರ ಅತ್ಯಗತ್ಯವಾಗಿರುತ್ತದೆ.

ಗುತ್ತಿಗೆ ಸಂಸ್ಥೆಯು ನಿರ್ವಹಿಸುತ್ತಿರುವ ಕಾಮಗಾರಿಗಳು ಹೆಚ್ಚು ಸಂಖ್ಯೆಯಲ್ಲಿದ್ದರೆ ದಾರಿಯ ಸ್ವಾಮ್ಯದ (ROW) ಸಮಸ್ಯೆಗಳನ್ನು ಪರಿಹರಿಸುವಲ್ಲಿ ಕ.ವಿ.ಪ್ರ.ನಿ.ನಿಗೆ ಅಗತ್ಯವಿರುವ ಸಹಕಾರವನ್ನು ವಿಸ್ತರಿಸಲು ಗುತ್ತಿಗೆದಾರರಿಗೆ ಕಷ್ಟವಾಗುತ್ತದೆ. ಇದರಿಂದಾಗಿ ಕೆಲಸಗಳ ನಿಗದಿತ ಮುಕ್ತಾಯದ ಅವಧಿಯು ಮುಂದಕ್ಕೆ ಹೋಗುತ್ತದೆ.

ಈ ಹಿಂದೆ ಒಂದೇ ಏಜೆನ್ಸಿಗೆ ಹೆಚ್ಚಿನ ಸಂಖ್ಯೆಯ ಕಾಮಗಾರಿಗಳನ್ನು ನೀಡಿದಾಗ ಕ.ವಿ.ಪ್ರ.ನಿ.ನಿಯು ಅಹಿತಕರ ಪರಿಸ್ಥಿತಿಯನ್ನು ಅನುಭವಿಸಿತ್ತು. ಸದರಿ ಗುತ್ತಿಗೆ ಸಂಸ್ಥೆಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ ಮತ್ತು ಬದಲಾದ ಸನ್ನಿವೇಶದಲ್ಲಿ ವಿದ್ಯುತ್ ಪ್ರಸರಣ ಮಾರ್ಗವನ್ನು ಎಳೆಯಲು ಭೂ ಮಾಲೀಕರಿಂದ ಹೆಚ್ಚಿದ ಪ್ರತಿರೋಧದ ಪರಿಸ್ಥಿತಿಯಿಂದಾಗಿ ಅವುಗಳನ್ನು ಪೂರ್ಣಗೊಳಿಸಲು ಕ.ವಿ.ಪ್ರ.ನಿ.ನಿ.ಯು ತೀವ್ರವಾಗಿ ಪ್ರಯಾಸಪಡಬೇಕಾಯಿತು. ಇದಲ್ಲದೆ, ಗುತ್ತಿಗೆ ಸಂಸ್ಥೆಗೆ ನೀಡಲಾದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕ.ವಿ.ಪ್ರ.ನಿ.ನಿಯಿಂದ ಅನಪೇಕ್ಷಿತ ಕ್ಲೈಮ್‌ಗಳನ್ನು ಮಾಡುತ್ತಿದ್ದಾರೆ.

ಅದರಂತೆ, ನಿಗದಿತ ಅಗತ್ಯತೆಗಳ ಪ್ರಕಾರ ಕಾಮಗಾರಿಗಳ ಅನುಷ್ಠಾನದ ಹಿತಾಸಕ್ತಿಯಲ್ಲಿ ಗುತ್ತಿಗೆ ಏಜೆನ್ಸಿಯ ಆರ್ಥಿಕ ಸಾಮರ್ಥ್ಯ ಮತ್ತು ಕಾಮಗಾರಿಗಳ ಸಂಖ್ಯೆಯ ನಿರ್ವಹಣೆಯ ಸಾಮರ್ಥ್ಯವನ್ನು ನಿರ್ಣಯಿಸುವುದು ಅತ್ಯಗತ್ಯವೆಂದು ಭಾವಿಸಲಾಗಿದೆ.

ಟೆಂಡರ್ ದಾಖಲೆಗಳಲ್ಲಿ ನಿರ್ದಿಷ್ಟಪಡಿಸಿದ ಅರ್ಹತಾ ಅವಶ್ಯಕತೆಗೆ ಈ ಕೆಳಗಿನ ವಿಷಯಗಳಲ್ಲಿ ತಿದ್ದುಪಡಿ ಅಗತ್ಯವಿದೆ ಎಂದು ಭಾವಿಸಲಾಗಿದೆ.

ಅ) ಬಿಡ್ಡುದಾರರು ಎಲ್-1 (L1) ಆಗಿ ಹೊರಹೊಮ್ಮಿದ ಸಂದರ್ಭದಲ್ಲಿ ಕಾಮಗಾರಿಯ ಆದೇಶ ಇನ್ನೂ ನೀಡದಿದ್ದರೂ ಸದರಿ ಕಾಮಗಾರಿಯ ವೆಚ್ಚವನ್ನು ಪರಿಗಣಿಸುವುದು.

a) ಕ.ವಿ.ಪ್ರ.ನಿ.ನಿಯ ಕಾಮಗಾರಿಗಳ ಕಾರ್ಯಾದೇಶವನ್ನು ನೀಡಲು ಬಿಡ್ಡುದಾರರ ಸೂಕ್ತತೆಯನ್ನು ಅವರ ತಾಂತ್ರಿಕ ಮತ್ತು ಆರ್ಥಿಕ ಸಾಮರ್ಥ್ಯದ ಆಧಾರದ ಮೇಲೆ ಅರ್ಹತಾ ಮಾನದಂಡಗಳನ್ನು ಪರಿಗಣಿಸಿ ಮೌಲ್ಯಮಾಪನ ಮಾಡಲಾಗುತ್ತಿದೆ.

b) ಬಿಡ್‌ನಲ್ಲಿ ಯಶಸ್ವಿ ಬಿಡ್ಡುದಾರರ ಸಂಪನ್ಮೂಲಗಳ ಕ್ರೋಢೀಕರಣದ ಮತ್ತು ಕಾಮಗಾರಿಗಳನ್ನು ಪೂರ್ಣಗೊಳಿಸುವ ಸಾಮರ್ಥ್ಯವನ್ನು ಖಾತ್ರಿಪಡಿಸುವ ಉದ್ದೇಶದಿಂದ ಬಿಡ್ಡುದಾರರ ಆರ್ಥಿಕ ಸಾಮರ್ಥ್ಯ ಮತ್ತು ಕೈಯಲ್ಲಿರುವ ಕಾಮಗಾರಿಗಳೊಂದಿಗೆ ಪ್ರಸ್ತುತ ಟೆಂಡರನ್ನು ಸೇರಿಸಿ ಬಿಡ್ಡುದಾರರ ಸಾಮರ್ಥ್ಯವನ್ನು ನಿರ್ಣಯಿಸಲು ಟೆಂಡರ್ ಅವಕಾಶ ಒದಗಿಸುತ್ತದೆ. ಈ ನಿಟ್ಟಿನಲ್ಲಿ ಟೆಂಡರ್ ಷರತ್ತುಗಳ ಸಾರಾಂಶವು ಈ ಕೆಳಗಿನಂತಿದೆ.
"ಪ್ರಸ್ತುತ ಟೆಂಡರಿನ ಕಾರ್ಯಾದೇಶದ ಗುತ್ತಿಗೆ ಮೊತ್ತ ಸೇರಿದಂತೆ ಕೈಯಲ್ಲಿರುವ ಕಾಮಗಾರಿಯ ಒಟ್ಟು ಮೌಲ್ಯವು ಬಿಡ್ಡುದಾರರ ಕನಿಷ್ಠ ಸರಾಸರಿ ವಾರ್ಷಿಕ ವಹಿವಾಟಿನ (MAAT) 2 ಪಟ್ಟು ಮೀರಿದರೆ ಬಿಡ್ಡುದಾರರು ಅನರ್ಹರಾಗಿರುತ್ತಾರೆ".

c) ಹಣಕಾಸಿನ ಮೌಲ್ಯಮಾಪನದ ಪ್ರಕ್ರಿಯೆ ಮತ್ತು ನಂತರ ಅನುಮೋದನೆ ನೀಡುವ ನಿರ್ಧಾರವು ಸ್ವಲ್ಪ ಸಮಯ ತೆಗೆದುಕೊಳ್ಳುವುದರಿಂದ ಇತ್ತೀಚೆಗೆ ಆಹ್ವಾನಿಸಲಾದ ಇತರೆ ಟೆಂಡರ್‌ಗಳ ಅನುಮೋದನೆ ಹಂತದಲ್ಲಿ ಬಿಡ್ಡುದಾರರು ಸದರಿ ಟೆಂಡರುಗಳಲ್ಲಿ ಭಾಗವಹಿಸಿ ಬಿಡ್‌ಗಳನ್ನು ಸಲ್ಲಿಸುವ ಸಾಧ್ಯತೆಯಿರುವುದರಿಂದ ಟೆಂಡರ್ ಷರತ್ತುಗಳ ತಿದ್ದುಪಡಿಯ ಅಗತ್ಯವಿದೆಯೆಂದು ಭಾವಿಸಲಾಗಿದೆ.

ಆ) <u>ಬಿಡ್ಡುದಾರರ ಕೈಯಲ್ಲಿರುವ ಕಾಮಗಾರಿಗಳನ್ನು ಸೀಮಿತಗೊಳಿಸುವುದು.</u>

a) ಟರ್ನ್ ಕೀ ಆಧಾರದ ಮೇಲೆ ನೀಡಲಾದ ಕಾಮಗಾರಿಗಳ ಕಾರ್ಯಗತಗೊಳಿಸುವಿಕೆಯು ಅನಿವಾರ್ಯವಾದ ದಾರಿಯ ಸ್ವಾಮ್ಯದ (ROW) ಸಮಸ್ಯೆಗಳನ್ನು ಹೊರತುಪಡಿಸಿ ವಿವಿಧ ಕಾರಣಗಳಿಂದ ಕಾರ್ಯಾರಂಭಗೊಳ್ಳುವಲ್ಲಿ ವಿಳಂಬವಾಗುತ್ತಿದೆ.

b) ಟರ್ನ್ ಕೀ ಗುತ್ತಿಗೆದಾರರು ಹೆಚ್ಚಿನ ಸಂಖ್ಯೆಯ ಕಾಮಗಾರಿಗಳನ್ನು ನಿರ್ವಹಿಸುವುದರಿಂದ ಸಂಪನ್ಮೂಲಗಳ ಕ್ರೂಢೀಕರಣ, ದಾರಿಯ ಸ್ವಾಮ್ಯದ (ROW) ಸಮಸ್ಯೆಗಳನ್ನು ಪರಿಹರಿಸುವಲ್ಲಿ ಕ.ವಿ.ಪ್ರ.ನಿ.ನಿಗೆ ಸಹಾಯಮಾಡುವುದು ಇತ್ಯಾದಿ ವಿಷಯಗಳಿಂದಾಗಿ ಕಾಮಗಾರಿಗಳ ಗುಣಮಟ್ಟ ಮತು ಸಕಾಲಿಕ ನಿರ್ವಹಣೆ ಎರಡರ ಮೇಲೂ ಪರಿಣಾಮ ಬೀರುತ್ತದೆ.

c) ಪ್ರಸ್ತುತ, ಕ.ವಿ.ಪ್ರ.ನಿ.ನಿಯ ಕಾಮಗಾರಿಗಳನ್ನು ಕಾರ್ಯಗತಗೊಳಿಸಲು ಕರೆಯಲಾಗುತ್ತಿರುವ ಟೆಂಡರ್‌ಗಳಲ್ಲಿ ಒಬ್ಬ ಬಿಡ್ಡುದಾರರು/ಒಕ್ಕೂಟದ ಪಾಲುದಾರರು (Consortium Partner) ನಿರ್ವಹಿಸುತ್ತಿರುವ ಕಾಮಗಾರಿಗಳ ಸಂಖ್ಯೆಯನ್ನು ಲೆಕ್ಕಿಸದೆ ಬಿಡ್‌ಗಳನ್ನು ಪರಿಗಣಿಸಲಾಗುತ್ತಿರುವುದರಿಂದ, ಕಾಮಗಾರಿಗಳ ಸಕಾಲಿಕ ನಿರ್ವಹಣೆಗೆ ಅಡ್ಡಿಯಾಗುವ ಸಾಧ್ಯತೆಯಿರುತ್ತದೆ.

d) ಅದರಂತೆ, ಕ.ವಿ.ಪ್ರ.ನಿ.ನಿಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಟೆಂಡರ್‌ಗಳಲ್ಲಿ ಭಾಗವಹಿಸಲು ಅರ್ಹರಾಗಲು ಒಬ್ಬ ಬಿಡ್ಡುದಾರರು/ಒಕ್ಕೂಟದ ಪಾಲುದಾರರು (Consortium Partner) ನಿರ್ವಹಿಸುವ ಕಾಮಗಾರಿಗಳ ಸಂಖ್ಯೆಯನ್ನು ನಿರ್ಬಂಧಿಸುವುದು ಅಗತ್ಯವೆಂದು ಭಾವಿಸಲಾಗಿದೆ.

ಆದ್ದರಿಂದ, ದಿನಾಂಕ: 18.11.2021 ರಂದು ನಡೆದ 126ನೇ ಮಂಡಳಿ ನಿರ್ದೇಶಕರುಗಳ ಸಭೆಯಲ್ಲಿ ಕ.ವಿ.ಪ್ರ.ನಿ.ನಿ ಉಪಕೇಂದ್ರಗಳ ಸ್ಥಾಪನೆ, ಪ್ರಸರಣ ಮಾರ್ಗಗಳ ನಿರ್ಮಾಣ ಮತ್ತು ಹಾಲಿ ಇರುವ ಮೂಲ ಸೌಕರ್ಯಗಳ ಉನ್ನತೀಕರಣಕ್ಕೆ ಸಂಬಂಧಿಸಿದಂತೆ ಟೆಂಡರ್ ದಾಖಲೆಗಳಿಗೆ ಈ ಕೆಳಗಿನಂತೆ ತಿದ್ದುಪಡಿ ಮಾಡಲು ಅನುಮೋದಿಸಲಾಯಿತು.

a) ಟೆಂಡರ್ ದಾಖಲೆಯಲ್ಲಿನ ಅರ್ಹತಾ ಅವಶ್ಯಕತೆಯಲ್ಲಿ ಆರ್ಥಿಕ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಷರತ್ತುಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲು.

| ಕ್ರಮ ಸಂಖ್ಯೆ | ಅಸ್ತಿತ್ವದಲ್ಲಿರುವಂತೆ | ತಿದ್ದುಪಡಿ ಮಾಡಲು ಪ್ರಸ್ತಾಪಿಸಿದಂತೆ |
|---|---|---|
| 1. | ಪ್ರಸ್ತುತ ಟೆಂಡರಿನ ಕಾರ್ಯಾದೇಶದ ಗುತ್ತಿಗೆ ಮೊತ್ತ ಸೇರಿದಂತೆ ಕೈಯಲ್ಲಿರುವ ಕಾಮಗಾರಿಯ ಒಟ್ಟು ಮೌಲ್ಯವು ಬಿಡ್ಡುದಾರರ ಕನಿಷ್ಠ ಸರಾಸರಿ ವಾರ್ಷಿಕ ವಹಿವಾಟಿನ (MAAT) 2 ಪಟ್ಟು ಮೀರಿದರೆ ಬಿಡ್ಡುದಾರರು ಅನರ್ಹರಾಗುತ್ತಾರೆ. | ಪ್ರಸ್ತುತ ಕಾರ್ಯಾದೇಶದ ಗುತ್ತಿಗೆ ಮೊತ್ತ ಸೇರಿದಂತೆ ಕೈಯಲ್ಲಿರುವ ಕಾಮಗಾರಿಗಳ ಒಟ್ಟು ಮೌಲ್ಯ ಮತ್ತು ಆಂತರಿಕ ಲೆಕ್ಕ ಪರಿಶೋಧನೆಯ ನಂತರ ಬಿಡ್ಡುದಾರರು ಎಲ್-1 (L1) ಆಗಿ ಹೊರಹೊಮ್ಮಿದ ಟೆಂಡರ್‌ಗಳ ಕರಾರಿನ ಮೌಲ್ಯವನ್ನು ಸೇರಿಸಿಕೊಂಡು ಬಿಡ್ಡುದಾರರ ಕನಿಷ್ಠ ಸರಾಸರಿ ವಾರ್ಷಿಕ ವಹಿವಾಟಿನ (MAAT) 2 ಪಟ್ಟು ಮೀರಿದರೆ ಬಿಡ್ಡುದಾರರು ಅನರ್ಹರಾಗುತ್ತಾರೆ. |

ಒಂದೇ ಬಿಡ್ಡುದಾರರ ಎರಡು ಅಥವಾ ಹೆಚ್ಚಿನ ಟೆಂಡರ್‌ಗಳು ಏಕಕಾಲದಲ್ಲಿ ಪರಿಗಣನೆಯಲ್ಲಿದ್ದರೆ ಮತ್ತು ಆ ಎಲ್ಲಾ ಟೆಂಡರ್‌ಗಳನ್ನು ಪರಿಗಣಿಸಲು ಸಾಕಷ್ಟು ಹಣಕಾಸಿನ ವಹಿವಾಟು ಮೊತ್ತ ಲಭ್ಯವಿಲ್ಲದಿದ್ದರೆ, ಟೆಂಡರ್ ಪರಿಶೀಲನಾ ಸಮಿತಿಯು ಅವುಗಳಲ್ಲಿ ಹೆಚ್ಚಿನ ಮೌಲ್ಯದ ಟೆಂಡರನ್ನು ಪರಿಗಣಿಸುವ ಮಾನದಂಡವನ್ನು ಅಳವಡಿಸಿಕೊಳ್ಳಬಹುದು ಅಥವಾ ಹಣಕಾಸಿನ ಅವಶ್ಯಕತೆಯನ್ನು ಪೂರೈಸುವ ಟೆಂಡರನ್ನು ಪರಿಗಣಿಸಿ ಮೌಲ್ಯಮಾಪನವನ್ನು ಮುಂದುವರಿಸಬಹುದು.

b) ಕ.ವಿ.ಪ್ರ.ನಿ.ನಿಯ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸಲು ಅರ್ಹರಾಗಲು ಒಬ್ಬ ಬಿಡ್ಡುದಾರರು/ಒಕ್ಕೂಟದ ಪಾಲುದಾರರು (Consortium Partner) ನಿರ್ವಹಿಸುತ್ತಿರುವ ಕಾಮಗಾರಿಗಳ ಸಂಖ್ಯೆಯನ್ನು ನಿಗದಿಪಡಿಸುವ ಮೂಲಕ ಹೊಸ ಷರತ್ತನ್ನು ಟೆಂಡರ್ ದಾಖಲೆಗಳ "ಬಿಡ್ ಗೆ ಆಹ್ವಾನ" ಐ.ಎಫ್.ಬಿ (IFB) ಸಂಪುಟ–1 ರಲ್ಲಿ ಪರಿಚಯಿಸಲು ಈ ಕೆಳಗಿನಂತೆ ಪ್ರಸ್ತಾಪಿಸಲಾಗಿದೆ.

<u>ಗುತ್ತಿಗೆ ಏಜೆನ್ಸಿಗಳು ನಿರ್ವಹಿಸುವ ಕಾಮಗಾರಿಗಳ ಸಂಖ್ಯೆಯ ಮೇಲಿನ ನಿರ್ಬಂಧಗಳು:</u>

ಬಿಡ್ ದಾಖಲೆಗಳ ಯಾವುದೇ ಇತರ ಷರತ್ತುಗಳಲ್ಲಿ ಎಲ್ಲಿಯಾದರೂ ಏನೇ ಇದ್ದರೂ ಕೆಳಕಂಡ ಅಂಶಗಳ ಆಧಾರದ ಮೇಲೆ ಬಿಡ್‌ಗಳನ್ನು ಪರಿಗಣಿಸಲಾಗುವುದಿಲ್ಲ.

i. ಸ್ವತಂತ್ರವಾಗಿ ಭಾಗವಹಿಸಿದ ಬಿಡ್ಡುದಾರರು ನಿರ್ವಹಿಸುತ್ತಿರುವ ಮತ್ತು ಬಾಕಿ ಉಳಿದಿರುವ ಕಾಮಗಾರಿಗಳು 10ಕ್ಕೂ ಹೆಚ್ಚು ಮತ್ತು ಪ್ರತಿ ಕಾಮಗಾರಿಯ ಮೊತ್ತವು ರೂ.7 ಕೋಟಿಗೂ ಹೆಚ್ಚಿದ್ದರೆ (ರೂ ಏಳು ಕೋಟಿ).

ಅಥವಾ

ii. ಪ್ರಮುಖ ಬಿಡ್ಡುದಾರರಾಗಿ (Lead Bidder) ಅಥವಾ ಒಕ್ಕೂಟದ ಪಾಲುದಾರರಾಗಿ ನಿರ್ವಹಿಸುತ್ತಿರುವ ಮತ್ತು ಬಾಕಿ ಉಳಿದಿರುವ ಕಾಮಗಾರಿಗಳು ಒಟ್ಟು 15ಕ್ಕಿಂತ ಹೆಚ್ಚು ಇದ್ದರೆ ಮತ್ತು ಪ್ರತಿ ಕಾಮಗಾರಿಯ ಮೊತ್ತವು ರೂ.7 ಕೋಟಿಗೂ ಹೆಚ್ಚಿದ್ದರೆ (ರೂ ಏಳು ಕೋಟಿ).

ಕವಿಪ್ರನಿನಿಯ ಟೆಂಡರ್‌ಗಳಲ್ಲಿ ಭಾಗವಹಿಸಿದ ಬಿಡ್ಡುದಾರರ ಭಾಗವಹಿಸುವಿಕೆಯು ಸ್ವತಂತ್ರವಾಗಿದೆಯೇ ಅಥವಾ ಒಕ್ಕೂಟದ ವ್ಯವಸ್ಥೆಯಲ್ಲಿದೆಯೇ ಎಂಬುದನ್ನು ಪರಿಗಣಿಸದೆ ಮೇಲಿನ ಮಾನದಂಡಗಳನ್ನು ಪ್ರತ್ಯೇಕವಾಗಿ ಪೂರೈಸಬೇಕು, ಇಲ್ಲದಿದ್ದಲ್ಲಿ ಪ್ರಸ್ತಾಪವನ್ನು ತಿರಸ್ಕರಿಸಲಾಗುವುದು.

c) ಕ.ವಿ.ಪ್ರ.ನಿ.ನಿಯ ಮುಂದಿನ ಟೆಂಡರ್‌ಗಳಲ್ಲಿ ಟೆಂಡರ್ ದಾಖಲೆಗಳ "ಬಿಡ್‌ಗೆ ಆಹ್ವಾನ" ಐ.ಎಫ್.ಬಿ ಸಂಪುಟ–1 ರಲ್ಲಿ ಮೇಲಿನ ಮಾರ್ಪಾಡುಗಳನ್ನು ಅಳವಡಿಸಿಕೊಳ್ಳುವುದು.

ಆದ್ದರಿಂದ ಈ ಆದೇಶ:

**ORDER NO: KPTCL/CEE(T&P)/B19/345/85-86, Bengaluru Dated: 06.04.2022**

ಕ.ವಿ.ಪ್ರ.ನಿ.ನಿ ಉಪಕೇಂದ್ರಗಳ ಸ್ಥಾಪನೆ, ಪ್ರಸರಣ ಮಾರ್ಗಗಳ ನಿರ್ಮಾಣ ಮತ್ತು ಹಾಲಿ ಇರುವ ಮೂಲ ಸೌಕರ್ಯಗಳ ಉನ್ನತೀಕರಣಕ್ಕೆ ಸಂಬಂಧಿಸಿದಂತೆ ಟೆಂಡರ್ ದಾಖಲೆಯಲ್ಲಿನ ಷರತ್ತುಗಳಿಗೆ ತಿದ್ದುಪಡಿಗಳನ್ನು ಸಂಯೋಜಿಸಲು ಈ ಮೂಲಕ ಅನುಮೋದನೆಯನ್ನು ನೀಡಲಾಗಿದೆ.

a) ಟೆಂಡರ್ ದಾಖಲೆಯಲ್ಲಿನ ಅರ್ಹತಾ ಅವಶ್ಯಕತೆಯಲ್ಲಿ ಆರ್ಥಿಕ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ ಅಸ್ತಿತ್ವದಲ್ಲಿರುವ ಷರತ್ತುಗಳನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಲು.

| ಕ್ರಮ ಸಂಖ್ಯೆ | ಅಸ್ತಿತ್ವದಲ್ಲಿರುವಂತೆ | ತಿದ್ದುಪಡಿ |
|---|---|---|
| 1. | ಪ್ರಸ್ತುತ ಟೆಂಡರಿನ ಕಾರ್ಯಾದೇಶದ ಗುತ್ತಿಗೆ ಮೊತ್ತ ಸೇರಿದಂತೆ ಕೈಯಲ್ಲಿರುವ ಕಾಮಗಾರಿಯ ಒಟ್ಟು ಮೌಲ್ಯವು ಬಿಡ್ಡುದಾರರ ಕನಿಷ್ಠ ಸರಾಸರಿ ವಾರ್ಷಿಕ ವಹಿವಾಟಿನ (MAAT) 2 ಪಟ್ಟು ಮೀರಿದರೆ ಬಿಡ್ಡುದಾರರು ಅನರ್ಹರಾಗುತ್ತಾರೆ. | ಪ್ರಸ್ತುತ ಕಾರ್ಯಾದೇಶದ ಗುತ್ತಿಗೆ ಮೊತ್ತ ಸೇರಿದಂತೆ ಕೈಯಲ್ಲಿರುವ ಕಾಮಗಾರಿಗಳ ಒಟ್ಟು ಮೌಲ್ಯ ಮತ್ತು ಆಂತರಿಕ ಲೆಕ್ಕ ಪರಿಶೋಧನೆಯ ನಂತರ ಬಿಡ್ಡುದಾರರು ಎಲ್-1 (L1) ಆಗಿ ಹೊರಹೊಮ್ಮಿದ ಟೆಂಡರ್‌ಗಳ ಕರಾರಿನ ಮೌಲ್ಯವನ್ನು ಸೇರಿಸಿಕೊಂಡು ಬಿಡ್ಡುದಾರರ ಕನಿಷ್ಠ ಸರಾಸರಿ ವಾರ್ಷಿಕ ವಹಿವಾಟಿನ (MAAT) 2 ಪಟ್ಟು ಮೀರಿದರೆ ಬಿಡ್ಡುದಾರರು ಅನರ್ಹರಾಗುತ್ತಾರೆ. |

ಒಂದೇ ಬಿಡ್ಡುದಾರರ ಎರಡು ಅಥವಾ ಹೆಚ್ಚಿನ ಟೆಂಡರ್‌ಗಳು ಏಕಕಾಲದಲ್ಲಿ ಪರಿಗಣನೆಯಲ್ಲಿದ್ದರೆ ಮತ್ತು ಆ ಎಲ್ಲಾ ಟೆಂಡರ್‌ಗಳನ್ನು ಪರಿಗಣಿಸಲು ಸಾಕಷ್ಟು ಹಣಕಾಸಿನ ವಹಿವಾಟು ಮೊತ್ತ ಲಭ್ಯವಿಲ್ಲದಿದ್ದರೆ, ಟೆಂಡರ್ ಪರಿಶೀಲನಾ ಸಮಿತಿಯು ಅವುಗಳಲ್ಲಿ ಹೆಚ್ಚಿನ ಮೌಲ್ಯದ ಟೆಂಡರನ್ನು ಪರಿಗಣಿಸುವ ಮಾನದಂಡವನ್ನು ಅಳವಡಿಸಿಕೊಳ್ಳಬಹುದು ಅಥವಾ ಹಣಕಾಸಿನ ಅವಶ್ಯಕತೆಯನ್ನು ಪೂರೈಸುವ ಟೆಂಡರನ್ನು ಪರಿಗಣಿಸಿ ಮೌಲ್ಯಮಾಪನವನ್ನು ಮುಂದುವರಿಸಬಹುದು.

b) ಕ.ವಿ.ಪ್ರ.ನಿ.ನಿಯ ಕಾಮಗಾರಿಗಳ ಟೆಂಡರ್‌ಗಳಲ್ಲಿ ಭಾಗವಹಿಸಲು ಅರ್ಹರಾಗಲು ಒಬ್ಬ ಬಿಡ್ಡುದಾರರು/ಒಕ್ಕೂಟದ ಪಾಲುದಾರರು (Consortium Partner) ನಿರ್ವಹಿಸುತ್ತಿರುವ ಕಾಮಗಾರಿಗಳ ಸಂಖ್ಯೆಯನ್ನು ನಿಗದಿಪಡಿಸುವ ಮೂಲಕ ಹೊಸ ಷರತ್ತನ್ನು ಟೆಂಡರ್ ದಾಖಲೆಗಳ "ಬಿಡ್ ಗೆ ಆಹ್ವಾನ" ಐ.ಎಫ್.ಬಿ (IFB) ಸಂಪುಟ-1 ರಲ್ಲಿ ಪರಿಚಯಿಸಲು ಈ ಕೆಳಗಿನಂತೆ ಪ್ರಸ್ತಾಪಿಸಲಾಗಿದೆ.

ಗುತ್ತಿಗೆ ಏಜೆನ್ಸಿಗಳು ನಿರ್ವಹಿಸುವ ಕಾಮಗಾರಿಗಳ ಸಂಖ್ಯೆಯ ಮೇಲಿನ ನಿರ್ಬಂಧಗಳು:

ಬಿಡ್ ದಾಖಲೆಗಳ ಯಾವುದೇ ಇತರ ಷರತ್ತುಗಳಲ್ಲಿ ಎಲ್ಲಿಯಾದರೂ ಏನೇ ಇದ್ದರೂ ಕೆಳಕಂಡ ಅಂಶಗಳ ಆಧಾರದ ಮೇಲೆ ಬಿಡ್‌ಗಳನ್ನು ಪರಿಗಣಿಸಲಾಗುವುದಿಲ್ಲ.

i. ಸ್ವತಂತ್ರವಾಗಿ ಭಾಗವಹಿಸಿದ ಬಿಡ್ಡುದಾರರು ನಿರ್ವಹಿಸುತ್ತಿರುವ ಮತ್ತು ಬಾಕಿ ಉಳಿದಿರುವ ಕಾಮಗಾರಿಗಳು 10ಕ್ಕೂ ಹೆಚ್ಚು ಮತ್ತು ಪ್ರತಿ ಕಾಮಗಾರಿಯ ಮೊತ್ತವು ರೂ.7 ಕೋಟಿಗೂ ಹೆಚ್ಚಿದ್ದರೆ (ರೂ ಏಳು ಕೋಟಿ).

ಅಥವಾ

ii. ಪ್ರಮುಖ ಬಿಡ್ಡುದಾರರಾಗಿ (Lead Bidder) ಅಥವಾ ಒಕ್ಕೂಟದ ಪಾಲುದಾರರಾಗಿ ನಿರ್ವಹಿಸುತ್ತಿರುವ ಮತ್ತು ಬಾಕಿ ಉಳಿದಿರುವ ಕಾಮಗಾರಿಗಳು ಒಟ್ಟು 15ಕ್ಕಿಂತ ಹೆಚ್ಚು ಇದ್ದರೆ ಮತ್ತು ಪ್ರತಿ ಕಾಮಗಾರಿಯ ಮೊತ್ತವು ರೂ.7 ಕೋಟಿಗೂ ಹೆಚ್ಚಿದ್ದರೆ (ರೂ ಏಳು ಕೋಟಿ).

ಕವಿಪ್ರನಿನಿಯ ಟೆಂಡರ್‌ಗಳಲ್ಲಿ ಭಾಗವಹಿಸಿದ ಬಿಡ್ಡುದಾರರ ಭಾಗವಹಿಸುವಿಕೆಯು ಸ್ವತಂತ್ರವಾಗಿದೆಯೇ ಅಥವಾ ಒಕ್ಕೂಟದ ವ್ಯವಸ್ಥೆಯಲ್ಲಿದೆಯೇ ಎಂಬುದನ್ನು ಪರಿಗಣಿಸದೆ ಮೇಲಿನ ಮಾನದಂಡಗಳನ್ನು ಪ್ರತ್ಯೇಕವಾಗಿ ಪೂರೈಸಬೇಕು, ಇಲ್ಲದಿದ್ದಲ್ಲಿ ಪ್ರಸ್ತಾಪವನ್ನು ತಿರಸ್ಕರಿಸಲಾಗುವುದು.

c) ಕ.ವಿ.ಪ್ರ.ನಿ.ನಿಯ ಮುಂದಿನ ಟೆಂಡರ್‌ಗಳಲ್ಲಿ ಟೆಂಡರ್ ದಾಖಲೆಗಳ "ಬಿಡ್‌ಗೆ ಆಹ್ವಾನ" ಐ.ಎಫ್.ಬಿ ಸಂಪುಟ–1 ರಲ್ಲಿ ಮೇಲಿನ ಮಾರ್ಪಾಡುಗಳನ್ನು ಅಳವಡಿಸಿಕೊಳ್ಳುವುದು.

ಈ ಆದೇಶ ತಕ್ಷಣವೇ ಜಾರಿಗೆ ಬರಲಿದೆ.

BR 6/4/22

ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ)
ಕವಿಪ್ರನಿನಿ

ಪ್ರತಿಗಳು:

1. ಎಲ್ಲಾ ಮುಖ್ಯ ಇಂಜಿನಿಯರು (ವಿದ್ಯುತ್), ಕವಿಪ್ರನಿನಿ.
2. ಆ.ಸ(ಲೆಮತ್ತುಸ)/ಆ.ಸ(ಆ/ಪ), ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.
3. ಎಲ್ಲಾ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.
4. ಎಲ್ಲಾ ಅಧೀಕ್ಷಕ ಇಂಜಿನಿಯರು, ಕವಿಪ್ರನಿನಿ.
5. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು.
6. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರು(ವಿ), ಟಿ.ಎಲ್.ಎಸ್.ಎಸ್ ಮತ್ತು ಬೃಹತ್ ಕಾಮಗಾರಿ ವಿಭಾಗ, ಕವಿಪ್ರನಿನಿ.
7. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ.

8. ಆಪ್ತ ಕಾರ್ಯದರ್ಶಿಯವರಿಗೆ ವ್ಯವಸ್ಥಾಪಕ ನಿರ್ದೇಶಕರು, ನಿರ್ದೇಶಕರು(ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು (ಆ ಮತ್ತು ಮಾಸಂ), ಕವಿಪ್ರನಿನಿ, ಬೆಂಗಳೂರು ರವರ ಮಾಹಿತಿಗಾಗಿ ಹಾಗು ಅದನ್ನು ವ್ಯನಿ/ನಿ(ತಾ)/ನಿ(ಹ)/ನಿ(ಮಾ&ಸಂ) ರವರ ಮುಂದಿಡಲು.
9. ಅಧೀಕ್ಷಕ ಇಂಜಿನಿಯರು, ವಿದ್ಯುತ್, ಐಟಿ ಮತ್ತು ಎಂಐಎಸ್, ಕವಿಪ್ರನಿನಿ, ಕಾವೇರಿಭವನ, ಬೆಂಗಳೂರು ರವರಿಗೆ ಕವಿಪ್ರನಿನಿಯ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಲು.